ಶ್ರೀ ಎಚ್. ಡಿ. ದೇವೇಗೌಡ.—ಕೆರೆಯ ಹೊಳನ್ನ ತೆಗೆಸುವುದು ಲಾಭದಾಯಕವಲ್ಲ ಎಂಬುದಾಗಿ ಸರ್ಕಾರ ಅಭಿಪ್ರಾಯವನ್ನು ಹೊಂದಿದೆ. ಈ ಬಗ್ಗೆ ನಾವು ಸಮಾಲೋಚನೆ ಮಾಡಿದ್ದೇವೆ. ಡೀ ಸಿಲ್ಟಿಂಗ್ ಮಾಡುವುದಕ್ಕೆ ಪ್ರಯತ್ನ ಮಾಡುವುದಾದರೆ ಬಹಳ ಕಷ್ಟವಾಗುತ್ತದೆ. ಎಂಬುದನ್ನು ಸರ್ಕಾರ ಆಲೋಚನೆಮಾಡಿದ್ದು ಇದರ ಬಗ್ಗೆ ಆದ್ಯತೆಯನ್ನು ನಿಗದಿ ಮಾಡಬೇಕೆಂಬ ಅಭಿಪ್ರಾಯಕ್ಕೆ ಬಂದಿದ್ದೇವೆ. ಆದರೂ ಈ ಕೆಲಸವನ್ನು ಎನ್.ಆರ್.ಇ.ಪಿ. ಹಾಗೂ ಆರ್.ಎಲ್.ಇ.ಜಿ.ಪಿ. ಯೋಜನೆಯಲ್ಲಿ ಸ್ಥಳೀಯ ಜನರಿಗೆ ಕೆಲಸವನ್ನು ಒದಗಿಸಿಕೊಡುವ ದೃಷ್ಟಿಯಿಂದ ಈ ಕೆಲಸಕ್ಕಾಗಿ ಹಣವನ್ನು ಖರ್ಚು ಮಾಡಬಹುದು ಈ ಕೆಲಸವನ್ನು ಮಾಡುವುದಕ್ಕಾಗಿ ಆದ್ಯತೆಯ ಪಟ್ಟಿಯಲ್ಲಿ ಇದನ್ನು ಸೇರಿಸಿದ್ದೇವೆ. ಆದರೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಆ ಕೆರೆಗೆ ಹೊಳನ್ನು ತೆಗೆಯುವ ಸಲುವಾಗಿ ಶೇ ಲಕ್ಷ ಹಣವನ್ನು ಖರ್ಚು ಮಾಡುವುದರಿಂದ ಅದು ಕಾಸ್ಟ್ಲಿ ಪ್ರೊಸೆಸ್ ಆಗುತ್ತದೆ. ಮಾನ್ಯ ಸದಸ್ಯರು ಹೇಳಿರುವ ರೀತಿಯಲ್ಲಿ ಳಖಂ ಎಕರೆ ಭೂಮಿ ಇರುವುದೂ ನಿಜ. ಕೆರೆಯ ಅರ್ಧ ಭಾಗ ಹೊಳಿನಿಂದ ತುಂಬಿರುವುದೂ ನಿಜ ಮೊದಲು ನೀರು ಏನು ಶೇಖರಣೆಯಾಗುತ್ತಿತ್ತು, ಅದರ ಅರ್ಧ ಭಾಗದಷ್ಟು ನೀರು ಶೇಖರಣೆಯಾಗುತ್ತಿರುವುದೂ ನಿಜ. ಇದರ ಡೀ ಸಿಲ್ಟಿಂಗ್ ಕಷ್ಟವಾಗುತ್ತದೆ. ಆದರೂ ಇದರ ಬಗ್ಗೆ ಸರ್ಕಾರ ಪುನಃ ಆಲೋಚನೆ ಮಾಡುತ್ತದೆ.

ಶ್ರೀ ಬಿ. ಲಕ್ಕಪ್ಪ.—ಕೆರೆಯ ಮೇಲ್ಗಡೆ, ಗಣಿ ಕಾರ್ಯ ನಡೆಯುತ್ತಿದ್ದು, ಮಣ್ಣನ್ನು ಮೇಲೆತ್ತಿ ಪುನಃ ಅದನ್ನು ಆ ಪಿಟ್‌ನಲ್ಲಿ ಹಾಕದೆ ಹಾಗೆಯೇ ಬಿಟ್ಟು ಬಿಡುತ್ತಾರೆ, ಅದು ಮಳೆ ಬಂದಾಗ ಕೊಚ್ಚಿ ಕೊಂಡು ಬಂದು ಕೆರೆಯಲ್ಲಿ ತುಂಬಿಕೊಳ್ಳುತ್ತಿದೆ. ಮತ್ತೆ ಕೆರೆಗೆ ಹೊಳು ಬರದೇ ಇರುವ ರೀತಿಯಲ್ಲಿ ಕೆರೆಯ ಮೇಲ್ಗಡೆ ಪಿಟ್‌ಗಳನ್ನು ತೆಗೆಸಿ, ಇದನ್ನು ತಡೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಮತ್ತೆ ಗಣಿ ಇಲಾಖೆಯವರು ಮಣ್ಣನ್ನು ಏನು ಹೊರೆಗೆ ತೆಗೆಯುತ್ತಾರೆ, ಅದನ್ನು ಪುನಃ ಆ ಪಿಟ್‌ನ ಒಳಗಡೆ ಹಾಕುವುದಕ್ಕೆ ಸರ್ಕಾರ ಅವರಿಗೆ ತಿಳುವಳಿಕೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಮೇಲುಗಡೆಯಲ್ಲಿ ಗಣಿ ಇಲಾಖೆಯವರು ಕೆಲಸ ಮಾಡುತ್ತಿರತಕ್ಕಂತಹ ಸ್ಥಳದಲ್ಲಿ ಲೂಸ್ ಮಣ್ಣು ಏನಿನೆ, ಅದು, ಹಾಗೂ ಮಳೆಯಿಂದ ಬರತಕ್ಕ ಮಣ್ಣು ಇದನ್ನು ಅವಾಯ್ಡ್ ಮಾಡುವುದಕ್ಕೆ, ಸಿಲ್ಟ್ ಟ್ರಿಪ್ಸ್‌ಗಳನ್ನು ಮಾಡುವುದಕ್ಕೆ ಸಾಧ್ಯವೇ ಅಂತ ಹೇಳಿದ್ದಾರೆ. ಇದರ ಜೊತೆಗೆ ಕೆರೆಯ ಮೇಲ್ಬಾಗದಿಂದ ಬರತಕ್ಕ ಮಣ್ಣನ್ನು ಸಹ ತಪ್ಪಿಸುವುದಕ್ಕೆ ಸರ್ಕಾರ ಎರೋಜನ್ ಪಿಟ್ಸ್‌ಗಳನ್ನು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಲಾಗುತ್ತಿದೆ.

ಬಿಜಾಪುರ ಜಿಲ್ಲೆಯಲ್ಲಿರುವ ಹಿಪ್ಪರಗಿ ಬ್ಯಾರೇಜ್

೩೧೭ **ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).**—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಲೋಕೋಪಯೋಗಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

(ಅ) ಬಿಜಾಪುರ ಜಿಲ್ಲೆಯಲ್ಲಿ ಹಿಪ್ಪರಗಿ ಬ್ಯಾರೇಜ್ ಕಟ್ಟುವ ಕಾರ್ಯ ಎಂದು ಪ್ರಾರಂಭವಾಯಿತು ಹಾಗೂ ಅದು ಈಗ ಯಾವ ಹಂತದಲ್ಲಿದೆ ಮತ್ತು ಆ ಬಗ್ಗೆ ೧೯೮೪-೮೫ ಮತ್ತು ೧೯೮೫-೮೬ ರಲ್ಲಿ ಗೊತ್ತುಪಡಿಸಿರುವ ಹಣದ ಮೊಬಲಗೆಷ್ಟು ?

(ಆ) ಈ ಬ್ಯಾರೇಜ್ ಕಟ್ಟುವ ಕಾರ್ಯದಲ್ಲಿ ೧೯೮೪ರ ವರೆಗೆ ಎಷ್ಟು ಹಣ ವೆಚ್ಚವಾಗಿದೆ ಹಾಗೂ ಇದಕ್ಕಾಗಿ ಇರುವ ಸಿಬ್ಬಂದಿಯ ಸಂಖ್ಯೆ ಬಲವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿಗಳು).—

(ಅ) ಹಿಪ್ಪರಗಿ ಬ್ಯಾರೇಜ್ ಕೆಲಸವು ೧೯೭೩ರಲ್ಲಿ ಬರಗಾಲ ಕಾಮಗಾರಿ ಎಂದು ಶುರು ವಾಯಿತು. ಒಟ್ಟು ೫೯೧೫ಿ.೬ಳಿ ಮೀಟರ್ ಉದ್ದದ ಮಣ್ಣಿನ ಒಡ್ಡು ಇದ್ದು ಇದರಲ್ಲಿ ೪೮೦೦ ಮೀಟರ್ ಮಣ್ಣಿನ ಒಡ್ಡನ್ನು ಸಮುದ್ರ ಪಾತಳಿಯಿಂದ ಸರಾಸರಿ ೫೩೫ ಮೀಟರ್ ಎತ್ತರದವರೆಗೆ ಕಟ್ಟಲಾಗಿದೆ. ಸ್ಪಿಲ್‌ವೇ ಭಾಗದ ಕಾಂಕ್ರೀಟ್ ಅಡಿಪಾಯವನ್ನು ಆರ್.ಎಲ್. ೫೧೦ ೮ ಮೀಟರುವರೆಗೆ ಹಾಕಿರುತ್ತದೆ. ಮೀಟರು ವರೆಗೆ ಹಾಕಿರುತ್ತದೆ. ೧೯೮೪-೮೫ ಹಾಗೂ ೧೯೮೫-೮೬ರಲ್ಲಿ ಈ ಯೋಜನೆಗೆ ಹಣವನ್ನು ಗೊತ್ತು ಪಡಿಸಲಾಗಿಲ್ಲ.

(ಅ) ಹಿಪ್ಪರಗಿ ಬ್ಯಾರೇಜ್ ಕಾರ್ಯಕ್ಕೆ ಮಾರ್ಚ್ ೧೯೮೪ರ ಕೊನೆಯವರೆಗೆ ಖರ್ಚಾದ ಹಣ ೩೧೬.೭ ಲಕ್ಷ ರೂಪಾಯಿಗಳು. ಇದಕ್ಕಾಗಿ ಒಂದು ಉಪ ವಿಭಾಗ ಕೆಲಸ ಮಾಡುತ್ತಿದೆ. ಈ ಉಪ ವಿಭಾಗದಲ್ಲಿ ೧೩ ಜನ ಸಿಬ್ಬಂದಿ ಇದ್ದಾರೆ.

ಈ ಸಂದರ್ಭದಲ್ಲಿ ಕೇಂದ್ರ ನೀರಾವರಿ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದಾರೆ. ಅವರೇ ರಾಜ್ಯ ಸರ್ಕಾರಕ್ಕೆ ಒಂದು ಪತ್ರವನ್ನು ಲಿಖಿತದ ಮೂಲಕ ಕೊಡದಿದ್ದರೂ ನಾವು ಅಲ್ಲಿಗೆ ಹೋಗಿ ಚರ್ಚೆ ಮಾಡತಕ್ಕಂತಹ ಕಾಲದಲ್ಲಿ ಅವರೇ ಹೇಳಿದರು. ಇದಕ್ಕೆ ಹೆಚ್ಚು ಹಣವನ್ನು ಕೊಡುತ್ತೇನೆ. ಇದನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸತಕ್ಕ ಕೆಲಸವನ್ನು ಸರ್ಕಾರ ಪ್ರಯತ್ನ ಮಾಡಲಿ ಅಂತ ಹೇಳಿದ್ದರು. ಅದರಂತೆ ನಾವು ಅದನ್ನು ಸೇರಿಸಿದ್ದೇವೆ. ಆದರೆ ವರ್ಕ್‌ಔಟ್ ಮಾಡುವಾಗ ಪ್ಲಾನಿಂಗ್ ಕಮೀಷನ್‌ನವರು ಇದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಅಂತ ಹೇಳುತ್ತಾರೆ. ಇದು ಯೂಸ್‌ಫುಲ್ ಅಲ್ಲವೆಂದು ಅದನ್ನು ಹಿಂದೆ ಸರಿಸಿದ್ದಾರೆ. ಪುನಃ ಸಂಸತ್ ಸದಸ್ಯರ ಸಭೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿದಾಗ, ಚರ್ಚೆ ನಡೆಯುವಂತಹ ಕಾಲದಲ್ಲಿ ಇದು ಪ್ರಸ್ತಾಪಕ್ಕೆ ಬಂತು. ಆವಾಗ ಇದನ್ನು ಪುನಃ ಒತ್ತಾಯ ಮಾಡುತ್ತೇವೆ, ನಾವು ಇದನ್ನು ಪ್ಲಾನಿಂಗ್ ಕಮೀಷನ್‌ಗೆ ಹೇಳಿ ಸೇರಿಸುತ್ತೇವೆ ಅಂತಹೇಳಿದರು. ಆ ರೀತಿಯ ಸೂಚನೆಯನ್ನು ಕೊಟ್ಟಂತಹ ಸನ್ನಿವೇಶದಲ್ಲಿ, ಇದನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಲೇಬೇಕು ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಸಹಿಗೆ ಹೋದಂತಹ ಸಂದರ್ಭದಲ್ಲಿ ಒತ್ತಾಯ ಮಾಡಿದ್ದೇವೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನ ಸೇರಿಸಿ ಹಣವನ್ನು ಕೊಟ್ಟರೆ ಕೇಂದ್ರ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಕಳೆದ ಎರಡು ವರ್ಷಗಳಲ್ಲಿ ದೇವನಹಳ್ಳಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಹೊಸ ಕೆರೆಗಳ ವಿಚಾರ

೪೧೯. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಲೋಕೋಪಯೋಗ ಮತ್ತು ನೀರಾವರಿ ಸಚಿವರು ಕೆಳಕಂಡ ಪಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹೊಸ ಕೆರೆಗಳು ಮಂಜೂರಾಗಿವೆ. ಹಾಗೂ ಅವುಗಳು ಯಾವುವು ?

(ಆ) ಅವುಗಳ ನಿರ್ಮಾಣ ಕಾರ್ಯ ಯಾವ ಯಾವ ಹಂತಗಳಲ್ಲಿವೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ರಾಮೇನಹಳ್ಳಿ ಬಳಿ ಒಂದು ಹೊಸ ಕೆರೆ ಮಂಜೂರಾಗಿದೆ.

(ಆ) ಕೆಲಸವನ್ನು ಜನವರಿ ೧೯೮೫ರಲ್ಲಿ ತಂಡು ಕೆಲಸದ ಮೇಲೆ ತೆಗೆದುಕೊಳ್ಳಲಾಗಿದ್ದು ಕೆಲಸ ಪ್ರಗತಿಯಲ್ಲಿದೆ.

ಇದನ್ನು ಪೀಸ್ ವರ್ಕ್ ಸಿಸ್ಟಂ ಮೇಲೆ ಕೆಲಸವನ್ನು ತೆಗೆದುಕೊಂಡಂ ಮಾಡುತ್ತಿದ್ದಾರೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—೧೯೮೩-೮೪ನೇ ಸಾಲಿನಲ್ಲಿ ನಮ್ಮ ತಾಲ್ಲೂಕಿನಲ್ಲಿ ಸುಮಾರು ೭ ಕೆರೆಗಳು ಮಂಜೂರಾಗಿದ್ದವು. ಅದರಲ್ಲಿ ಒಂದು ಕೆರೆ ರಾಮೇನ ಹಳ್ಳಿಯಲ್ಲಿ ಆಗುತ್ತಿದ್ದು ಅದನ್ನು ಸನ್ಮಾನ್ಯ ಮಂತ್ರಿಗಳೇ ಶಂಕುಸ್ಥಾಪನೆಯನ್ನು ಮಾಡಿದ್ದಾರೆ. ಅಲ್ಲಿ ಕೆಲಸ ಪ್ರಾರಂಭವಾಗಿದೆ. ಎರಡನೆಯದು ನನ್ನ ಸ್ವಂತ ಊರಾದ ಪಾಪಾನ ಹಳ್ಳಿಯಲ್ಲಿ ಒಂದು ಕೆರೆ ಮಂಜೂರಾಗಿದೆ. ಮಂಜೂರಾದಂತಹ ೭ ಕೆರೆಗಳಲ್ಲಿ ಇದೂ ಒಂದು. ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂಬ ಮಟ್ಟದಲ್ಲಿದ್ದಾಗ ಇಲಾಖೆಯ ಇಂಜಿನೀಯರ್ಸ್‌ಗಳು ಸ್ಥಳ ಪರಿಶೀಲನೆ ಮಾಡಿದ್ದಾರೆ. ಕೆರೆಯನ್ನು ಆ ಸ್ಥಳದಲ್ಲಿ ಕಟ್ಟಿದರೆ, ಕೆರೆ ಉಕ್ಕಿ ಬಂದಾಗ, ಅಥವಾ ಹೆಚ್ಚು ನೀರು ಬಂದಾಗ ಕೆರೆಕೋಡಿದು ಹೋದರೆ, ಪಕ್ಕದ ಹಳ್ಳಿ ಪೂರ್ಣವಾಗಿ ಕೊಚ್ಚಿಕೊಂಡು ಹೋಗಬಹುದು ಎಂಬ ದೃಷ್ಟಿಯಿಂದ ೧೯೮೫ನೇ ಇಸವಿ ಯಲ್ಲಿ ಶ್ರೀಮಾನ್ ಗುಂಡೂರಾಯರ ಕಾಲದಲ್ಲಿ ಗೋಪಿನಾಥಂಎಂಬ ಊರಿನ ಕೆರೆ ಓಡೆದು ಹೋಗಿ ಊರೇ ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಯಿತಲ್ಲ, ಆ ಒಂದು ಮೂಲ ತಾಂತ್ರಿಕ ದೃಷ್ಟಿಯನ್ನಿಟ್ಟುಕೊಂಡು ಪಾಪನಹಳ್ಳಿಯ ಕೆರೆಯನ್ನು ಕೈಬಿಟ್ಟಿದ್ದಾರೆ. ಒಂದು ಕೆರೆ ಮಂಜೂರಾಗಬೇಕಾದರೆ, ಹತ್ತಾರು ವರ್ಷಗಳಾದರೂ ಸರ್ಕಾರದಿಂದ